**<u>ಸಾಕ್ಷಿಗೆ ದಿನಾಂಕ 03-08-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ ಕೆ ಎಂ ಆರ್ ವಕೀಲರಿಂದಃ</u>**

1. ಅರ್ಜಿದಾರರಿಗೆ ನಾನು ವೈಯಕ್ತಿಕವಾಗಿ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ನಾನು ಅಂಗನ್ಯೂನತೆಯನ್ನು ಬಲಗಾಲಿನ ಪಾದಕ್ಕೆ ಮಾತ್ರ ನಿರ್ಧರಿಸಿರುತ್ತೇನೆ. ಅರ್ಜಿದಾರರ 3 ಮತ್ತು 4 ಮೆಟಟಾರ್ಸ್ ನ ಮೂಳೆಮುರಿತವಾಗಿದೆ ಎಂದರೆ ಸರಿ. ಮೆಟಟಾರ್ಸ್ ನ ಮೂಳೆಮುರಿತಕ್ಕೆ ಮಾರ್ಗಸೂಚಿಯ ಷೆಡ್ಯೂಲ್ ನಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಪಾದದ 3 ಮತ್ತು 4 ನೇ ಬೆರಳನ್ನು ಕತ್ತರಿಸಿದರೆ ಶೇ.3 ಮತ್ತು 4 ರಷ್ಟು ಅನುಕ್ರಮವಾಗಿ ಅಂಗನ್ಯೂನತೆಯನ್ನು ನಿಗಧಿಪಡಿಸಿರುತ್ತಾರೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಸಂಪೂರ್ಣ ದೇಹಕ್ಕೆ ಶೇ.22 ರಷ್ಟು ಅಂಗನ್ಯೂನತೆಯನ್ನು ನಿರ್ಧರಿಸಿರುವುದು ಹೆಚ್ಚಿನಿಂದ ಕೂಡಿದೆ ಮತ್ತು ಮಾರ್ಗಸೂಚಿಗೆ ವಿರುದ್ಧವಾಗಿದೆ ಎಂದರೆ ಸರಿಯಲ್ಲ.

2. ಅರ್ಜಿದಾರರಿಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ವಿಧ್ಯಾಭ್ಯಾಸಕ್ಕೆ ಮತ್ತು ಉದ್ಯೋಗಕ್ಕೆ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಮುಂದುವರೆದ ಚಿಕಿತ್ಸೆಗೆ ಸಲಹೆ ನೀಡಿರುವುದಿಲ್ಲ ಎಂದರೆ ಸರಿ.

ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.
<u>ಮರು ವಿಚಾರಣೆಃ ಇಲ್ಲ.</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**(ಧನೇಶ್ ಮುಗಳಿ)**
**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**